ವಿಶೇಷ ಲೇಖನ

# ವಿವೇಕಾನಂದರು ಮತ್ತು ಸಂಸ್ಕೃತ ಶಿಕ್ಷಣ

ಸ್ವಾಮಿ ಗೌತಮಾನಂದ

(ಪೂಜ್ಯ ಸ್ವಾಮೀಜಿಯವರು ಚೆನ್ನೈ ನಗರದಲ್ಲಿರುವ ಸಂಸ್ಕೃತ ಕಾಲೇಜಿನ ಶತಮಾನೋತ್ಸವ ಸಮಾರಂಭದಲ್ಲಿ ಮಾಡಿದ ಭಾಷಣದ ಸಂಗ್ರಹರೂಪ. ಇದನ್ನು ನೀಡಿದ್ದಕ್ಕಾಗಿ ಪೂಜ್ಯ ಸ್ವಾಮೀಜಿಯವರಿಗೆ ಕೃತಜ್ಞತೆಗಳು–ಸಂ.)

**ಚೆನ್ನೈ** ನಗರದ ಈ ಸಂಸ್ಕೃತ ಕಾಲೇಜು ಹಲವಾರು ವೈದಿಕ ದರ್ಶನಗಳಲ್ಲಿ ಮತ್ತು ವ್ಯಾಕರಣ, ಜ್ಯೋತಿಷಗಳೇ ಮೊದಲಾದ ಸಂಬಂಧಿಸಿದ ಶಾಸ್ತ್ರವಿಷಯಗಳಲ್ಲಿ ಅತ್ಯಂತ ಉನ್ನತ ಮಟ್ಟದ ಶಿಕ್ಷಣ ವನ್ನು ನೀಡುತ್ತಿದೆ. ಈ ಸಂಸ್ಥೆಯು ಯಶಸ್ವಿಯಾಗಿ ನೂರು ವರ್ಷಗಳನ್ನು ಸುಸಂಪನ್ನಗೊಳಿಸುತ್ತಿರುವ ಈ ಶುಭಸಂದರ್ಭದಲ್ಲಿ, ಈ ಮಹಾವಿದ್ಯಾ ನಿಲಯದ ವ್ಯವಸ್ಥಾಪಕರು, ಶಿಕ್ಷಕರು ಮತ್ತು ಪೋಷಕರನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಭಾರತವನ್ನು ಕಾಡುತ್ತಿರುವ ಎಲ್ಲ ಕಷ್ಟಗಳಿಗೂ ಉತ್ತಮ ಶಿಕ್ಷಣ ವೊಂದೇ ರಾಮಬಾಣವಾಗಬಹುದೆಂದು ಸ್ವಾಮಿ ವಿವೇಕಾನಂದರು ನಂಬಿದ್ದರು. ಅವರ ಪ್ರಕಾರ ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮನುಷ್ಯ ನನ್ನಾಗಿಸುವುದು, ವ್ಯಕ್ತಿತ್ವ ನಿರ್ಮಾಣ ಮಾಡುವುದು; ಆರ್ಥಿಕವಾಗಿ ವ್ಯಕ್ತಿ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವ ತರಬೇತಿ ನೀಡುವುದು, ಅಲ್ಲದೆ ಇಡೀ ಮಾನವ ಜನಾಂಗವನ್ನೇ ದೇವರ ಕುಟುಂಬವೆಂದು ಭಾವಿಸಿ ಪ್ರೀತಿಸುವ ಆಧ್ಯಾತ್ಮಿಕ ಜಾಗೃತಿಯನ್ನುಂಟುಮಾಡುವುದು. ಅಂತಹ ಆಧ್ಯಾತ್ಮಿಕ ಜಾಗೃತಿ ಪಡೆದ ಭಾರತೀಯರು ಗುಲಾಮಗಿರಿಯಿಂದ ಕಳಚಿಕೊಳ್ಳುವ ಹೋರಾಟದಲ್ಲಿ ಒಂದಾಗುವರು ಮತ್ತು ರಾಷ್ಟ್ರೀಯ ಮನೋಭಾವದಿಂದ ತಮ್ಮ ದೇಶವನ್ನು ಪುನರ್‌ನಿರ್ಮಾಣ ಮಾಡು ವರು – ಇದು ಸ್ವಾಮಿ ವಿವೇಕಾನಂದರ ವಿಚಾರಧಾರೆಯಾಗಿತ್ತು.

ನಿರಂತರವಾಗಿ ೫೦೦೦ ವರ್ಷಗಳ ಕಾಲ ಹರಿದುಬಂದ ಉಜ್ವಲ ಸಾಂಸ್ಕೃತಿಕ ಪರಂಪರೆಯ ಪರಿಚಯಕ್ಕಾಗಿ ಸಂಸ್ಕೃತ ಭಾಷೆಯನ್ನು ಎಲ್ಲ ಭಾರತೀಯರೂ ಕಲಿಯುವುದು ಅಗತ್ಯ. ಹಾಗೆ ಕಲಿತು, ಆ ಅಡಿಪಾಯದ ಮೇಲೆಯೇ ಹಿಂದಿಗಿಂತಲೂ ವೈಭವಯುತವಾಗಿ ತಮ್ಮ ದೇಶವನ್ನು ಭಾರತೀಯರು ಕಟ್ಟಿಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಸಂಸ್ಕೃತ ಮತ್ತು ಅದರ ಕಲಿಕೆಯ ಬಗ್ಗೆ ಸ್ವಾಮಿ ವಿವೇಕಾನಂದರ ದೃಷ್ಟಿ ಹೀಗಿತ್ತು:

"ಆಧ್ಯಾತ್ಮಿಕ ಆಹಾರಕ್ಕಾಗಿ ಈಗ ಭಾರತಭೂಮಿಯತ್ತ ಜಗತ್ತು ತಿರುಗಿ ನೋಡುತ್ತಿದೆ. ಭಾರತ ಅದನ್ನು ಎಲ್ಲ ಜನಾಂಗಗಳಿಗೆ ನೀಡ ಬೇಕಾಗಿದೆ. ಮಾನವ ಜನಾಂಗದ ಅತ್ಯುತ್ತಮ ಆದರ್ಶ ಇಲ್ಲಿದೆ. ಸಂಸ್ಕೃತ ಸಾಹಿತ್ಯ ಮತ್ತು ತತ್ತ್ವಜ್ಞಾನಗಳಲ್ಲಿ ನೆಲೆಗೊಂಡಿರುವ ಈ ಆದರ್ಶವನ್ನು ಅರಿತುಕೊಳ್ಳಲು ಈಗ ಪಾಶ್ಚಿಮಾತ್ಯ ವಿದ್ವಾಂಸರು ಪ್ರಯತ್ನಿಸುತ್ತಿದ್ದಾರೆ."[1]

ಪೂಜ್ಯ ಸ್ವಾಮೀಜಿಯವರು ಚೆನ್ನೈ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರು ಮತ್ತು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಲ್ಲಿ ಒಬ್ಬರು.

ಭಾರತದ ಭವಿಷ್ಯತ್ತಿನ ಬಗೆಗೆ ಸ್ವಾಮಿ ವಿವೇಕಾನಂದರು ಹೀಗೆನ್ನು ತ್ತಾರೆ:

"ನಮ್ಮ ತೇಜಸ್ಸು, ನಮ್ಮ ಬಲ, ಜನಾಂಗ ಜೀವನದ ಮೂಲ ಭಿತ್ತಿಯೇ ನಮ್ಮ ಧರ್ಮ... ನೀವು ಧರ್ಮವನ್ನು ರಕ್ಷಿಸಿದುದರಿಂದಲೇ, ಅದಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದುದರಿಂದಲೇ ಹಲವು ಶತಮಾನಗಳ ಆಘಾತವನ್ನು ಸಹಿಸುವುದು ನಿಮಗೆ ಸಾಧ್ಯವಾಯಿತು. ನಿಮ್ಮ ಪೂರ್ವಿಕರು ಎಲ್ಲ ಕೋಟಲೆಗಳನ್ನೂ ಮೃತ್ಯುವನ್ನೂ ಧೈರ್ಯ ದಿಂದ ಎದುರಿಸಿ ಧರ್ಮವನ್ನು ರಕ್ಷಿಸಿದರು... ಇದೇ ನಮ್ಮ ಜನಾಂಗದ ಮನಸ್ಸು; ಇದೇ ನಮ್ಮ ಜೀವನ ಪ್ರವಾಹ. ಇದನ್ನು ಅನುಸರಿಸಿದರೆ ಮಹತ್ತಿಗೆ ಏರುವಿರಿ. ಇದನ್ನು ತ್ಯಜಿಸಿದರೆ ಸಾಯುವಿರಿ... ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗಳು ಅನಾವಶ್ಯಕವೆಂದು ನಾನು ಹೇಳುವುದಿಲ್ಲ... ಆದರೆ ಇಲ್ಲಿ ಅವು ಗೌಣ; ಇಲ್ಲಿ ಧರ್ಮವೇ ಮುಖ್ಯ. ಮೊದಲು ಇದನ್ನು ಬಲಪಡಿಸಬೇಕು. ಇದನ್ನು ಮಾಡುವುದು ಹೇಗೆ ?"

"ನಮ್ಮ ಶಾಸ್ತ್ರ ಗ್ರಂಥಗಳಲ್ಲಿ ಹುದುಗಿರುವ ಆಧ್ಯಾತ್ಮಿಕ ರತ್ನಗಳನ್ನು ಬಯಲಿಗೆ ತರಬೇಕು... ಅವು ಜನರಿಗೆ ಸುಲಭವಾಗಿ ತಲುಪುವಂತೆ ಮಾಡಬೇಕು. ಈ ಭಾವನೆಗಳನ್ನು ದೇಶಭಾಷೆಗಳ ಮೂಲಕ ಜನರಿಗೆ ಪ್ರಚಾರ ಮಾಡಬೇಕು. ಜೊತೆಗೇ ಸಂಸ್ಕೃತ ವಿದ್ಯಾಭ್ಯಾಸವೂ ನಡೆಯ ಬೇಕು. ಏಕೆಂದರೆ ಸಂಸ್ಕೃತ ಭಾಷೆಯ ಉಚ್ಚಾರಣೆಯೆ ಜನರಿಗೆ ಗೌರವ, ಶಕ್ತಿ, ತೇಜಸ್ಸುಗಳನ್ನು ನೀಡುವುದು."

"ದೇಶಭಾಷೆಯಲ್ಲಿ ಜನರಿಗೆ ಪ್ರಚಾರಮಾಡಿ, ಭಾವನೆಗಳನ್ನು ನೀಡಿ... ಆದರೆ ಅವರಿಗೆ ಮತ್ತೊಂದು ಅವಶ್ಯಕತೆಯೂ ಇದೆ, ಸಂಸ್ಕೃತಿ ಯನ್ನೂ ಕೊಡಿ."[2]

ಭಾರತೀಯ ಸಂಸ್ಕೃತಿಯನ್ನು ಅರಿಯಲು ಇರುವ ಕೀಲಿಕೈಯಾದ ಸಂಸ್ಕೃತವನ್ನು ಕಲಿಯಲು ಸ್ವಾಮಿ ವಿವೇಕಾನಂದರು ಹೀಗೆ ಒತ್ತಾಯಿಸು ತ್ತಾರೆ. ಈಗಾಗಲೇ ಉನ್ನತ ಸ್ಥಿತಿಯನ್ನು ತಲುಪಿದ ಜನರ ಪ್ರಗತಿಯು ಸಂಸ್ಕೃತವನ್ನು ಅಳವಡಿಸಿಕೊಳ್ಳುವುದರಿಂದ ಮತ್ತೂ ಸ್ಥಿರವಾಗುವುದು. ತಮ್ಮ ಪ್ರಾಚೀನ ಸಂಸ್ಕೃತಿಯನ್ನು ಅವಲಂಬಿಸದ 'ನಾಗರಿಕ' ಜನರು ಕೆಳಮಟ್ಟಕ್ಕೆ ಇಳಿಯುತ್ತಾರೆ. ಬುದ್ಧನ ಅನಂತರ ಕೆಲವೇ ಶತಮಾನಗಳಲ್ಲಿ ಬೌದ್ಧರ ಆಳ್ವಿಕೆಯಲ್ಲಿನ ಸಾಮಾನ್ಯರ ಸ್ಥಿತಿ ಶೋಚನೀಯವಾಗಲು ಅವರಲ್ಲಿ ಸಂಸ್ಕೃತಿಯನ್ನು ಹರಡದಿದ್ದುದು ಕಾರಣ ಎಂದು ಸ್ವಾಮೀಜಿ ಅಭಿಪ್ರಾಯ ಪಡುತ್ತಾರೆ.

ರಾಮಕೃಷ್ಣ ಮಿಷನ್ ಅರುಣಾಚಲ ಪ್ರದೇಶದ ಬುಡಕಟ್ಟು ಬಾಲಕರಿಗೆ ಶಿಕ್ಷಣ ಕೊಡುತ್ತಿದೆ. ಅಲ್ಲಿ ಈ ವಾಸ್ತವಾಂಶ ನಮ್ಮ ಅನುಭವಕ್ಕೆ ಬಂದಿದೆ. ಅಲ್ಲಿ ನಾವು ಹಿಂದಿ, ಇಂಗ್ಲಿಷ್, ಸಂಸ್ಕೃತ –ಈ ಮೂರೂ ಭಾಷೆಗಳನ್ನು ಕಲಿಸುತ್ತೇವೆ. ಇದು ಈಶಾನ್ಯ ರಾಜ್ಯಗಳ ಬುಡಕಟ್ಟು ಜನರಲ್ಲಿಯೇ ನಮ್ಮ ವಿದ್ಯಾರ್ಥಿಗಳನ್ನು ಅತ್ಯಂತ ಶಾಂತರೂ, ದೇಶ ಭಕ್ತರೂ ಆದ ವಿಶಿಷ್ಟ ಗುಂಪನ್ನಾಗಿಸಿದೆ. ಅವರು ಭಗವದ್ಗೀತೆಯನ್ನು ಓದುತ್ತಾರೆ, ವೇದಮಂತ್ರಗಳನ್ನು ಪಾರಾಯಣ ಮಾಡುತ್ತಾರೆ, ವರ್ಷದಲ್ಲಿ ಒಮ್ಮೆ ಸಂಸ್ಕೃತ ದಿನವನ್ನೂ ಆಚರಿಸುತ್ತಾರೆ!

ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿ ಆಡುಭಾಷೆಯಾಗಿ ಎಲ್ಲರೂ ಸಂಸ್ಕೃತವನ್ನು ಬಳಸುವ ಮತ್ತೂರು ಎಂಬ ಗ್ರಾಮವಿದೆ. ಅಲ್ಲಿಗೆ ನಾನು ಭೇಟಿ ಕೊಟ್ಟಿದ್ದೆ. ಇಡೀ ಗ್ರಾಮ ಉನ್ನತ ಸಂಸ್ಕೃತಿಯನ್ನು ಹೊಂದಿದೆ. ದೊಡ್ಡ ಶಿವ ದೇವಾಲಯವೊಂದರಲ್ಲಿ ಎಲ್ಲರೂ ಒಟ್ಟಾಗಿ

ಪೂಜೆ ಸಲ್ಲಿಸುತ್ತಾರೆ. ವರ್ಗ-ಜಾತಿಯ ಭೇದವಿಲ್ಲದೆ ಎಲ್ಲರೂ ಪರಸ್ಪರ ಸಹಕಾರ ಮನೋಭಾವದಿಂದ ಅಲ್ಲಿ ವಾಸಿಸುತ್ತಾರೆ.

ಕೇರಳದ ತ್ರಿಚೂರಿನಲ್ಲಿಯ ನಮ್ಮ ಪ್ರೌಢಶಾಲೆಯಲ್ಲಿ ಮುಸ್ಲಿಮರೂ ಸೇರಿ ಎಲ್ಲರಿಗೂ ಸಂಸ್ಕೃತ ಹೇಳಿಕೊಡುತ್ತಿದ್ದೇವೆ. ಸಂಸ್ಕೃತದಲ್ಲಿರುವ ಸಾಮಾನ್ಯ ಪ್ರಾರ್ಥನೆಯಲ್ಲಿ ಅವರೆಲ್ಲರೂ ಭಾಗವಹಿಸುತ್ತಾರೆ. ಅದರಲ್ಲಿ ವೇದಮಂತ್ರಗಳೂ ಸೇರಿರುತ್ತವೆ.

ನಮ್ಮ ಪ್ರಧಾನ ಕೇಂದ್ರವಾದ ಬೇಲೂರು ಮಠದಲ್ಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ಮತ್ತು ನಮ್ಮದೇ ಆದ ವಿವೇಕಾನಂದ ವಿಶ್ವವಿದ್ಯಾನಿಲಯದ ಸಂಯುಕ್ತ ಆಶ್ರಯದಲ್ಲಿ ವೇದ ವಿದ್ಯಾಲಯ ನಡೆಯುತ್ತಿದೆ. ಒಂಬತ್ತನೆಯ ತರಗತಿಯಿಂದ ಡಾಕ್ಟರೇಟ್‌ವರೆಗೆ ಉಚಿತ ಶಿಕ್ಷಣ ನೀಡುತ್ತಿರುವ ಈ ವಿದ್ಯಾಲಯದಲ್ಲಿ ಸುಮಾರು ಇಪ್ಪತ್ತೆರಡು ವಿದ್ಯಾರ್ಥಿಗಳಿದ್ದಾರೆ. ಈಚೆಗೆ ಈ ವಿದ್ಯಾರ್ಥಿಗಳು ಪುಣೆಯ ಭಂಡಾರಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಮತ್ತು ಇದೇ ಮದ್ರಾಸ್ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳೊಡನೆ ಪರಸ್ಪರ ಮಾತು ಕತೆ-ಚರ್ಚೆಯಲ್ಲಿ ಭಾಗವಹಿಸಿದ್ದರು. ವೇದಗಳು ಮತ್ತು ಭಾರತೀಯ ಸಂಸ್ಕೃತಿಯಲ್ಲಿ ಈ ವಿದ್ಯಾರ್ಥಿಗಳಿಗಿರುವ ಆಳವಾದ ಜ್ಞಾನವನ್ನು ಎಲ್ಲರೂ ಪ್ರಶಂಸಿಸಿದರು.

ಪ್ರತಿಯೊಬ್ಬ ಭಾರತೀಯನೂ ಸಂಸ್ಕೃತ ಮತ್ತು ವೇದಗಳ ಜ್ಞಾನವನ್ನು ಪಡೆಯಬೇಕೆಂದೂ, ಅದು ಅವನ ಮೂಢ ನಂಬಿಕೆಗಳೆಲ್ಲವನ್ನೂ ನಾಶಗೊಳಿಸುವುದೆಂದೂ ಸ್ವಾಮಿ ವಿವೇಕಾನಂದರು ಬಯಸಿದ್ದರು. "ಉಪನಿಷತ್ತುಗಳನ್ನು ಅಭ್ಯಾಸ ಮಾಡಿರಿ. ನಿಮಗೆ ಎದುರಾಗುವ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ನಿಮಗೆ ಅವು ಶಕ್ತಿ ನೀಡುವುವು" ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಅಸಂಖ್ಯಾತ ಋಷಿಗಳು ಕಂಡ ಆಧ್ಯಾತ್ಮಿಕ ಸತ್ಯದ ವಿವಿಧ ಆಯಾಮಗಳ ಮೊತ್ತವೇ ವೇದಗಳು; ಅವು ನಿತ್ಯವಾದವು ಎಂಬ ನಂಬಿಕೆ ನಮ್ಮದು.

ಬ್ರಹ್ಮ ತತ್ತ್ವವು ಅನಂತ ಅಸ್ತಿತ್ವ, ಜ್ಞಾನ, ಆನಂದಗಳ ಸ್ವರೂಪ ವಾಗಿದೆ. ಮೂಲ ಸತ್ಯವಾದ ಅದರಿಂದಲೇ ಎಲ್ಲ ಸೃಷ್ಟಿಯೂ ಹೊರಬಂದು, ಸ್ವಲ್ಪ ಕಾಲ ಇದ್ದು, ಅದರಲ್ಲಿಯೇ ಲಯವಾಗುತ್ತದೆ. ಈ ಐಕ್ಯತತ್ತ್ವವನ್ನು ಬಿಟ್ಟು ಹೆಚ್ಚಿನ ಯಾವ ಸತ್ಯವೂ ಇರಲಾರದು. ಆಧ್ಯಾತ್ಮಿಕ ಜೀವನದಲ್ಲಿ ಇದನ್ನೇ 'ಪೂರ್ಣ' ಎಂದು ವೇದಗಳು ಕರೆದಿವೆ; ಇದೇ ಇಡೀ ಮಾನವ ಜೀವನದ ಆದರ್ಶ ಎಂದು ಹೇಳಿವೆ.

ಆದುದರಿಂದಲೇ ಉಪನಿಷತ್ತುಗಳಲ್ಲಿ **'ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ ಇತಿ?'** ಯಾವುದನ್ನು ತಿಳಿಯುವುದರಿಂದ ಎಲ್ಲವೂ ತಿಳಿಯುವುದು? ಎಂಬ ಪ್ರಶ್ನೆಯನ್ನು ಕಾಣಬಹುದು. ಬ್ರಹ್ಮನಲ್ಲಿ ಸೃಷ್ಟಿಯ ಐಕ್ಯವನ್ನು ಕಾಣುವ ಜ್ಞಾನದಿಂದಾಗಿಯೇ ಭಾರತದಲ್ಲಿ ಎಲ್ಲೆಡೆ, ಎಲ್ಲದರಲ್ಲಿ ಆಧ್ಯಾತ್ಮಿಕತೆಯನ್ನು ಕಾಣುವ ಸಾಮರ್ಥ್ಯವನ್ನು ನೋಡಬಹುದಾಗಿದೆ. ಜಾತಿಮತಗಳ ವ್ಯತ್ಯಾಸವಿಲ್ಲದೆ ಎಲ್ಲರಲ್ಲೂ ಪ್ರತ್ಯಗಾತ್ಮನಾಗಿ ಬ್ರಹ್ಮತತ್ತ್ವವು ಇರುವುದೆಂದು ಭಾರತೀಯರು ನಂಬುತ್ತಾರೆ. ಹೀಗಾಗಿಯೇ **ಸರ್ವೇ ಜನಾಃ ಸುಖಿನೋ ಭವಂತು**- ಎಲ್ಲ ಜನರೂ ಸುಖಿಗಳಾಗಿ ಇರಲಿ ಎಂದು ಪ್ರಾರ್ಥಿಸುತ್ತ ಎಲ್ಲ ಜನರನ್ನೂ, ಧರ್ಮಗಳನ್ನೂ, ಸಂಸ್ಕೃತಿಗಳನ್ನೂ ಗೌರವಿಸುವುದು ಭಾರತೀಯರ ಸ್ವಭಾವವೇ ಆಗಿದೆ. ಸ್ವಾಮಿ ವಿವೇಕಾನಂದರು ೧೮೯೩ ರ ಚಿಕಾಗೋ ಧರ್ಮ ಸಮ್ಮೇಳನದಲ್ಲಿ ನೆರೆದಿದ್ದ, ಈ ಪ್ರಪಂಚದಲ್ಲಿರುವ ಎಲ್ಲ ಮತ, ಜನಾಂಗಗಳಿಗೆ ಸೇರಿದ ಸುಮಾರು ೭೦೦೦ ಜನ ಶ್ರೋತೃಗಳನ್ನು 'ಅಮೆರಿಕಾದ ನನ್ನ ಸಹೋದರ ಸಹೋದರಿಯರೇ', 'ಅಮೃತಾನಂದದ ಮಕ್ಕಳೇ' ಎಂದು ಸಂಬೋಧಿಸಿದ್ದು, ಇಂತಹ ಭಾವನೆಯಿಂದಲೇ.

ಪ್ರಪಂಚವೆಲ್ಲ ವಿಶ್ವಗ್ರಾಮವಾಗಿ, ವಿವಿಧ ದೇಶಗಳು ನೆರೆಮನೆಯವರಂತೆ ಬಾಳುತ್ತಿರುವ ಈಚಿನ ದಿನಗಳಲ್ಲಿ ನಮಗೆ ವಿಶ್ವಭ್ರಾತೃತ್ವದ ವಿಶ್ವಾತ್ಮಕ ಶಿಕ್ಷಣ ಅವಶ್ಯವಾಗಿದೆ. ಈಗಲೂ ನಾವು ಒಬ್ಬರನ್ನೊಬ್ಬರು ಪ್ರೀತಿಸಲು ಕಲಿಯದಿದ್ದರೆ, ವಿವಿಧ ಮತ-ಜೀವನ-ಸಂಸ್ಕೃತಿಗಳ ನಡುವೆ ಶಾಂತಿಯಿಂದ ಬಾಳುವುದಾದರೂ ಹೇಗೆ? ವಿಶ್ವಭ್ರಾತೃತ್ವ, ಸರ್ವ ಧರ್ಮ ಸಾಮರಸ್ಯ, ಮಾನವನಲ್ಲಿಯ ದಿವ್ಯತೆ, ಭಗವಂತನ ಸಂಕೇತವೆಂಬಂತೆ ಮಾನವನನ್ನು ಭಾವಿಸಿ ಸೇವೆ ಮಾಡುವುದು - ಇವೆಲ್ಲ ಈಗ ಬರೀ ಆದರ್ಶಗಳಾಗಿ ಉಳಿದಿಲ್ಲ. ಅವುಗಳು ನಮ್ಮ ಮಾನವ ಜನಾಂಗದ ಅಸ್ತಿತ್ವವನ್ನು ಉಳಿಸಿಕೊಳ್ಳಲು ವಿಧಿನಿಯಮವಾಗಿ ಬಳಕೆಯಾಗುವ ಪ್ರಸಂಗ ಈಗ ಒದಗಿ ಬಂದಿದೆ.

ಸ್ವಾಮಿ ವಿವೇಕಾನಂದರು ಬಯಸಿದಂತೆ, ಭಾರತವು ತನ್ನಲ್ಲಿರುವ ಆಧ್ಯಾತ್ಮಿಕ ಜ್ಞಾನವನ್ನು ಪಶ್ಚಿಮ ದೇಶಗಳಿಗೆ ನೀಡಿ, ಅದಕ್ಕೆ ಪ್ರತಿಯಾಗಿ ವಿಜ್ಞಾನ, ತಾಂತ್ರಿಕತೆಯನ್ನು ಅವುಗಳಿಂದ ಪಡೆಯಬೇಕಾಗಿದೆ. ಈ ಕನಸನ್ನು ನನಸು ಮಾಡಬೇಕಾದರೆ, ಭಾರತವು ಪುನರುಜ್ಜೀವನ ಗೊಳ್ಳುತ್ತ, ತನ್ನ ಹಿಂದಿನ ವೈಭವವನ್ನು ಮರಳಿ ಪಡೆದು, ವಿಶ್ವದ ಆಧ್ಯಾತ್ಮಿಕ ಗುರುವಾಗಲು ಸಜ್ಜುಗೊಳ್ಳುತ್ತಿರುವ ಈ ಮುಖ್ಯ ಮಜಲಿನಲ್ಲಿ ಸಂಸ್ಕೃತಜ್ಞಾನವನ್ನು ಹರಡುವುದು ಅತಿ ಮುಖ್ಯ.

ಕಡೆಯಲ್ಲಿ ಸ್ವತಃ ಸ್ವಾಮಿ ವಿವೇಕಾನಂದರೇ ಯಾರನ್ನು ಅವತಾರ ವರಿಷ್ಠ ಎಂದು ಕರೆದು ಆರಾಧಿಸಿದರೋ, ಅಂತಹ ಭಗವಾನ್ ಶ್ರೀರಾಮಕೃಷ್ಣರು ಈ ಮಹಾವಿದ್ಯಾಲಯವನ್ನೂ ಮತ್ತು ಅದರ ಅದ್ಭುತ ಯಶಸ್ಸಿನ ಹಿಂದೆ ಇರುವ ಎಲ್ಲ ಮಹನೀಯರನ್ನೂ ಅನುಗ್ರಹಿಸಲಿ ಎಂದು ಅವರಲ್ಲಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

(ಸಂಗ್ರಹಾನುವಾದ: ಡಾ. ಪಾಂಡುರಂಗ ವಿಠಲ)

**ಆಕರಗಳು:**

೧. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ೩: ೩೧

೨. ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ೩: ೧೬೨-೧೬೩

**ಆಶ್ರಮದ ಕಾರ್ಯಕ್ರಮಗಳು**

ಜುಲೈ 2008

| | | |
|---|---|---|
| 14 | ಸೋಮವಾರ | ಏಕಾದಶಿ |
| 18 | ಶುಕ್ರವಾರ | ಗುರುಪೂರ್ಣಿಮಾ |
| 29 | ಮಂಗಳವಾರ | ಏಕಾದಶಿ |
| 30 | ಬುಧವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |